ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **1515/2023**

| | | | |
|---|---|---|---|
| ಸಾಕ್ಷಿಯ ಹೆಸರು | : ಎಂ.ನಾಗರಾಜು | ಸಿ.ಡಬ್ಲ್ಯು 6 |
| ತಂದೆಯ ಹೆಸರು | : ಲೇಟ್.ಮಲ್ಲಪ್ಪ | ಪಿ.ಡಬ್ಲ್ಯು 4 |
| ವಯಸ್ಸು | : 63 ವರ್ಷ | |
| ಉದ್ಯೋಗ | : ನಿವೃತ್ತ ಅಬಕಾರಿ ನಿರೀಕ್ಷಕರು | |
| ವಾಸ ಸ್ಥಳ | : ಬೆಂಗಳೂರು | |

ದಿನಾಂಕ:**06-03-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ನಾನು ದಿನಾಂಕ 05.09.1999 ರಿಂದ 30.06.2023 ರವರಿಗೆ ಚಿಕ್ಕಮಗಳೂರು ಉಪವಿಭಾಗದಲ್ಲಿ ಅಬಕಾರಿ ನಿರೀಕ್ಷಕರು ಎಂದು ಕೆಲಸ ಮಾಡಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 01.04.2023 ರಂದು ಚಾಸ-4 ರವರಿಂದ ಪ್ರಕರಣಕ್ಕೆ ಸಂಬಂಧಪಟ್ಟ ಕಡತವನ್ನು ಪಡೆದುಕೊಂಡು ಪರಿಶೀಲಿಸಿದ್ದೇನೆ. ದಿನಾಂಕ 04.04.2023 ರಂದು ಪ್ರಕರಣದ ಸಾಕ್ಷಿದಾರರಾದ ಚಾಸ-1 ರಿಂದ 3 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಪ್ರಕರಣದಲ್ಲಿ ದಿನಾಂಕ 25.04.2023 ರಂದು ರಾಸಾಯನಿಕ ಪರೀಕ್ಷೆಗಾಗಿ ಮದ್ಯವನ್ನು ಬೆಂಗಳೂರಿಗೆ ಕಳುಹಿಸಿಕೊಟ್ಟಿದ್ದೇನೆ. ದಿನಾಂಕ 27.06.2023 ರಂದು ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿದ್ದೇನೆ. ದಿನಾಂಕ 28.04.2023 ರಂದು ಕೃತ್ಯ ನಡೆದ ಸ್ಥಳದ ಮಾಲೀಕತ್ವದ ಕುರಿತಾದ ದಾಖಲೆಯನ್ನು ಕೋರಿ ಸಂಬಂಧಪಟ್ಟ ಪಿ.ಡಿ.ಓ ರವರಿಗೆ ಪತ್ರವನ್ನು ಬರೆದಿದ್ದೇನೆ ಮತ್ತು ದಿನಾಂಕ 09.06.2023 ರಂದು ಅವರಿಂದ ಧೃಢೀಕರಣ ಪತ್ರವನ್ನು ಪಡೆದುಕೊಂಡಿದ್ದೇನೆ. ನಂತರ ಚಾಸ-7 ಇವರಿಗೆ ಕಡತವನ್ನು ವಹಿಸಿಕೊಟ್ಟಿದ್ದೇನೆ. ರಾಸಾಯನಿಕ ತಜ್ಞರಿಗೆ ಬರೆದ ಪತ್ರವನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು, ವರದಿಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು, ಪಿ.ಡಿ.ಓ ರವರಿಗೆ ಬರೆದ ಪತ್ರವನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು, ಪಿ.ಡಿ.ಓ ರವರ ಪತ್ರವನ್ನು ನಿಪಿ-11 ಎಂದು, ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:

ನಾನು ಸಾಕ್ಷಿದಾರರ ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಲ್ಲ ಮತ್ತು ವರದಿಯನ್ನು ಪಡೆದುಕೊಂಡಿಲ್ಲ

ಎಂದರೆ ಸರಿಯಲ್ಲ, ನಿಪಿ-8 ರಿಂದ 11 ಗಳನ್ನು ಪ್ರಕರಣಕ್ಕೆ ಅನುಕೂಡಲ ಆಗುವ ರೀತಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.